# ಬ್ಯೂಟಿಫುಲ್ ಸಾಧ್ವಿ!



■ ಪ್ರವೀಣ ಕುಲಕರ್ಣಿ

'ಆಪ್ ಇತನಿ ಸುಂದರ್ ಹೈ. ಕಭಿ ಐಸಾ ಮನ್ ನಹಿ ಕಿಯಾ ಕೀ ಸಾಧ್ವಿ ಜೀವನ್ ಛೋಡ್ ದೇ' (ಇಷ್ಟೊಂದು ಸುಂದರವಾಗಿದ್ದೀರಿ. ಸಾಧ್ವಿ ಜೀವನವನ್ನು ತೊರೆಯಬೇಕೆಂದು ನಿಮ್ಮ ಮನಸ್ಸಿನಲ್ಲಿ ಯಾವಾಗಲಾದರೂ ಬಂದಿದ್ದಿದೆಯೇ?)

'ಮುಝೆ ಜೋ ಕರ್‌ನಾ ಥಾ ವೋ ಛೋಡ್ ಕೆ ಮೈನೆ ಯೇ ವೇಷ್ ಧಾರಣ್ ಕಿಯಾ ಹೈ' (ನಾನು ಏನನ್ನು ಮಾಡಬೇಕೆಂದು ಬಯಸಿದ್ದೆನೋ ಅದನ್ನು ತೊರೆದು ಈ ವೇಷ ಧರಿಸಿದ್ದೇನೆ)

ಯೂಟ್ಯೂಬರ್ ಮತ್ತು 'ಬ್ಯೂಟಿಫುಲ್ ಸಾಧ್ವಿ' ಉರ್ಫ್ ಹರ್ಷಾ ರಿಚಾರಿಯಾ ಅವರ ನಡುವಿನ ಈ ಪುಟ್ಟ ಪ್ರಶ್ನೋತ್ತರ ಲಾಸ್ ಏಂಜಲೀಸ್‌ನ ಕಾಳ್ಗಿಚ್ಚಿನಂತೆಯೇ ಜಾಲತಾಣಗಳಲ್ಲಿ ಭರದಿಂದ ಹರಡುತ್ತಿದೆ. ನೆಟ್ಟಿಗರ ದೊಡ್ಡ ದಂಡೊಂದು ಈ ಸಾಧ್ವಿಯ ಮೂಲವನ್ನು ಕೆದಕಿ ಕೆದಕಿ ಹುಡುಕಿಕೊಂಡು ಹೊರಟಿದೆ, ಥೇಟ್ ಋಷಿಮೂಲವನ್ನು ಹುಡುಕಿಕೊಂಡು ಹೋದಂತೆ! ಹೌದು, ಪ್ರಯಾಗ್‌ರಾಜ್‌ನಲ್ಲಿ ನಡೆದಿರುವ ಮಹಾ ಕುಂಭಮೇಳದಲ್ಲಿ ನಾಗಾ ಸಾಧುಗಳಂತೆಯೇ ಗಮನಸೆಳೆದವರು ಈ 'ಬ್ಯೂಟಿಫುಲ್ ಸಾಧ್ವಿ'! ಮೂವತ್ತರ ಹರೆಯದ ಈ 'ಸಾಧ್ವಿ'ಯನ್ನು ಆರಾಧಿಸುವವರದೊಂದು ಮತ್ತು ಕಾಲು ಎಳೆಯುವವರದೊಂದು – ಹೀಗೆ ಎರಡು ತಂಡಗಳು ಸಾಮಾಜಿಕ ಜಾಲತಾಣಗಳಲ್ಲೀಗ ಬಲು ಸಕ್ರಿಯವಾಗಿವೆ.

ಕುಂಭಮೇಳದ ಕಣ್ಮಣಿ ಎನಿಸಿರುವ ಈ 'ಸಾಧ್ವಿ', ಈಗಿನ ಅವತಾರ ಎತ್ತುವ ಮುನ್ನ ಹಲವು ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ. ಆಗಿನ ವಿಡಿಯೊ ತುಣುಕುಗಳನ್ನು, ಆಕೆ ತುಂಡುಡುಗೆಯಲ್ಲಿದ್ದ ಚಿತ್ರಗಳನ್ನು ನೆಟ್ಟಿಗರು ಶೇರ್ ಮಾಡಿಕೊಳ್ಳುತ್ತಿದ್ದಾರೆ. ನಟಿಯಾಗಿ, ನಿರೂಪಕಿಯಾಗಿ, ಜಗತ್ತನ್ನು ಸುತ್ತುವ ಪಯಣಿಗಳಾಗಿ ಹಲವು ಅವತಾರಗಳಲ್ಲಿ, ಅಬ್ಬರದ ವೇದಿಕೆಗಳಲ್ಲಿ ಕಾಣಿಸಿಕೊಂಡ ಅವರಿಗೆ ಇದ್ದಕ್ಕಿದ್ದಂತೆ ಒಳಗಿನ ಶಾಂತಿಯನ್ನು ಹುಡುಕಬೇಕೆಂಬ ಹಂಬಲ ಶುರುವಾಯಿತಂತೆ. ಹಂಬಲ ತೀವ್ರವಾದಾಗ ಎರಡು ವರ್ಷಗಳ ಹಿಂದೆಯೇ ಅವರು ಮಂತ್ರ ದೀಕ್ಷೆ ಪಡೆದುಬಿಟ್ಟರಂತೆ. ದೀಕ್ಷೆ ಪಡೆದ ಮೇಲೂ ದೊಡ್ಡ ದೊಡ್ಡ ಮದುವೆ ಸಮಾರಂಭಗಳಲ್ಲಿ ಅವರು ನಿರೂಪಕಿಯಾಗಿ ಭಾಗವಹಿಸುವುದನ್ನು ಬಿಟ್ಟುಕೊಟ್ಟಿಲ್ಲ. ಇನ್‌ಸ್ಟಾಗ್ರಾಮ್‌ನಲ್ಲೂ ಸಕ್ರಿಯವಾಗಿರುವ ಈಕೆ, 6.90 ಲಕ್ಷ ಫಾಲೋವರ್‌ಗಳನ್ನು ಹೊಂದಿದ್ದಾರೆ.

ಹರ್ಷಾ ಅವರು, ಸಾಂಪ್ರದಾಯಿಕ ಸೀರೆ ಉಟ್ಟು, ಕೊರಳಲ್ಲಿ ರುದ್ರಾಕ್ಷಿ ಮಾಲೆ ತೊಟ್ಟು, ಹಣೆಯಲ್ಲಿ ಅಗಲವಾದ ಕುಂಕುಮದ ಬೊಟ್ಟು ಇಟ್ಟು ಕುಂಭಮೇಳದಲ್ಲಿ ಧ್ಯಾನಕ್ಕೆ ಕುಳಿತ ಮತ್ತು ಕಣ್ಮುಚ್ಚಿ 'ಸುಕೂನ್' (ಒಳಗಿನ ಶಾಂತಿ) ಅರಸುತ್ತಿದ್ದ ಚಿತ್ರ ಸಾಮಾಜಿಕ ಜಾಲತಾಣದಲ್ಲಿ ಬಿತ್ತರಗೊಂಡಿದ್ದೇ ತಡ, ಆಕೆ ಗ್ಲಾಮರ್ ಬಟ್ಟೆಗಳಲ್ಲಿದ್ದ ಚಿತ್ರಗಳ ಪ್ರವಾಹವೂ ಹರಿದಾಡತೊಡಗಿದೆ. 'ಸಾಧ್ವಿ' ಜೀವನದ ಪಾವಿತ್ರ್ಯಕ್ಕೆ ಈ ಚಿತ್ರಗಳು ಮಸಿ ಬಳಿಯುವುದಿಲ್ಲವೇ ಎಂದು ಪ್ರಶ್ನಿಸಿದವರು ಅದೆಷ್ಟೋ ಮಂದಿ. ಅರಳು ಹುರಿದಂತೆ ಮಾತನಾಡುವ ಈ 'ಸಾಧ್ವಿ' ಹಾಗೆ ತೆಗಳುವವರನ್ನು ಸುಮ್ಮನೆ ಬಿಟ್ಟಾರೆಯೇ ಮತ್ತೆ? 'ನಾನೇನು ಬಾಲ್ಯದಿಂದಲೇ ದೀಕ್ಷೆ ಪಡೆದಿದ್ದೇನೆಂದು ಎಲ್ಲಿಯೂ ಹೇಳಿಲ್ಲವಲ್ಲ? ನಾನು ಎರಡು ವರ್ಷಗಳ ಹಿಂದೆ ಮಂತ್ರ ದೀಕ್ಷೆ ಪಡೆದಿರುವುದು ನಿಜ. ನನ್ನ ಗುರುಗಳ ಮಾರ್ಗದರ್ಶನದಂತೆ ಜೀವನ ನಡೆಸಿದ್ದೇನೆ' ಎಂದು ಎದುರೇಟು ನೀಡಿದ್ದಾರೆ.

ನಿರಂಜನಿ ಅಖಾಡಾದ ಆಚಾರ್ಯ ಮಹಾಮಂಡಲೇಶ್ವರ ಸ್ವಾಮಿ ಕೈಲಾಶಾನಂದ ಗಿರೀಜಿ ಮಹಾರಾಜ್ ಅವರು ಹರ್ಷಾ ಅವರಿಗೆ ದೀಕ್ಷೆ ನೀಡಿದ ಗುರುಗಳಂತೆ. 'ಒಳಗಿನ ಶಾಂತಿ ಅರಸುತ್ತಿರುವ ನಾನು ಅದಕ್ಕಾಗಿ ಎಲ್ಲವನ್ನೂ ಬಿಟ್ಟು ಬಂದಿದ್ದೇನೆ. ಯಾರೇ ಆಗಲಿ, ತಮ್ಮ ಬದುಕಿನಲ್ಲಿ ಎಷ್ಟೇ ಅಲೆದಾಡಿದರೂ ಕೊನೆಗೆ ಅವರ ಹಣೆಬರಹದಲ್ಲಿ ಏನು ಬರೆದಿದೆಯೋ ಅದೇ ಆಗುವುದು' ಎಂಬ ಈ 'ಸಾಧ್ವಿ'ಯ 'ಆಧ್ಯಾತ್ಮಿಕ' ಹೇಳಿಕೆ ಸನಾತನ ಸಂಸ್ಕೃತಿ ಪ್ರಿಯರಿಗೆ ಕರ್ಣಾನಂದವನ್ನು ಉಂಟುಮಾಡಿದೆ. ಅಂಥವರೆಲ್ಲ ಸಾಧ್ವಿಯ ಬೆಂಬಲಕ್ಕೆ ನಿಂತಿದ್ದಾರೆ.

'ಧಾರ್ಮಿಕವಾಗಿ ಮಹತ್ವದ್ದಾದ ಮಹಾಕುಂಭಕ್ಕೆ ಬರುವಾಗಲೂ ಆಕೆ ಮಾಡಿಕೊಂಡ ಮೇಕಪ್ ನೋಡಿ. ಮಣಭಾರದ ಆ ಮೇಕಪ್‌ನ ಸ್ವರೂಪವೇ ಹೇಳುತ್ತದೆ, ಆಕೆಯೊಬ್ಬ 'ಫೇಕ್ (ನಕಲಿ) ಸಾಧ್ವಿ' ಎಂದು ಕಾಲೆಳೆದವರಿಗೂ ಲೆಕ್ಕವಿಲ್ಲ. ಆಕೆಯೊಬ್ಬ ನೈಜ ಸಾಧ್ವಿಯೇ ಆಗಿದ್ದರೆ ಇಷ್ಟೊಂದು ಮೇಕಪ್ ಮಾಡಿಕೊಂಡು ಬರುವ ಅಗತ್ಯವಿತ್ತೇ ಎಂಬ ಪ್ರಶ್ನೆಯೂ ಸಾವಿರ, ಸಾವಿರ ಬಾರಿ ಹರಿದಾಡಿದೆ. ಕುಂಭಮೇಳಕ್ಕಿಂತ ಎರಡು ತಿಂಗಳು ಮೊದಲು ಆಕೆ ಮದುವೆ ಸಮಾರಂಭವೊಂದರಲ್ಲಿ ನಿರೂಪಕಿಯಾಗಿದ್ದರು. ಚೀನಾದಲ್ಲಿ ನಡೆದ ಸಮಾರಂಭಕ್ಕೂ ಹೋಗಿ ಬಂದಿದ್ದರು ಎಂಬ ಮಾಹಿತಿಯನ್ನು ಹಂಚಿಕೊಂಡವರ ಸಂಖ್ಯೆಯೂ ದೊಡ್ಡದಿದೆ.

ಅಂದಹಾಗೆ, ಈ 'ಸಾಧ್ವಿ'ಯ ಮೂಲ ಉತ್ತರಾಖಂಡ. ತ್ರಿವೇಣಿ ಸಂಗಮದಲ್ಲಿ ಅವರು ಮುಳುಗೇಳುವಾಗ, ದಂಡೆಯ ಮೇಲೆ ಕುಳಿತು ಪ್ರಾರ್ಥಿಸುವಾಗ, ಸುಮ್ಮನೇ ನಡೆದು ಹೋಗುವಾಗ 'ಸೆಲೆಬ್ರಿಟಿ ಸಾಧ್ವಿ'ಯಾಗಿ ಕ್ಯಾಮೆರಾ ಕಣ್ಣುಗಳನ್ನೂ, ಸಾಧುಗಳ ಗಮನವನ್ನೂ, ಜನಸಾಮಾನ್ಯರ ಕುತೂಹಲದ ಕಣ್ಣುಗಳನ್ನೂ ತಮ್ಮತ್ತ ಸೆಳೆದ ಆಕೆಯ ಮುಂದಿನ ನಡೆ ಕುತೂಹಲ ಮೂಡಿಸಿದೆ. ಆಕೆಯ ಸಣ್ಣ ವಯಸ್ಸು ಮತ್ತು ಸೌಂದರ್ಯದ ತೇಜಸ್ಸು ಜಾಲತಾಣಿಗರನ್ನು ಎಷ್ಟೆಲ್ಲ ತಲೆ ಕೆಡಿಸಿಕೊಳ್ಳುವಂತೆ ಮಾಡಿದೆ. ಅಬ್ಬರದ ಜಗತ್ತಿನಿಂದ ಹೊರಬಂದ ಆಕೆ ಆಂತರಿಕ ಶಾಂತಿ ಅರಸಿ, ಜಪಮಾಲೆ ಹಿಡಿದರೆ, 'ತಪ'ಕ್ಕೆ ಕುಳಿತವಳ ಚಿತ್ರ ಹಿಡಿದ ಜಾಲಜಗ ಆಕೆಯ ಜಪ ಮಾಡುತ್ತಿದೆ. ಕುಂಭಮೇಳದ ಹರ ಹರ ಮಹಾದೇವ ಘೋಷದ ನಡುವೆಯೇ 'ಬ್ಯೂಟಿಫುಲ್ ಸಾಧ್ವಿ'ಯ ನಾಮಜಪವೂ ನಡೆಯುತ್ತಿದೆ! ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65